## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಪ್ರಬುದ್ಧ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಮತ್ತು ಸಹಾಯಧನ ಮಂಜೂರು ಮಾಡಲು ಕೆಲವು ಮಾನದಂಡಗಳನ್ನು ಪ್ರಬುದ್ಧ ಮಾರ್ಗಸೂಚಿಯಲ್ಲಿ ಸೇರ್ಪಡೆ ಮಾಡುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಸಕಇ 468 ಪಕವಿ 2020, ದಿನಾಂಕ:11.08.2021
2. ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಸಕಇ 468 ಪಕವಿ 2020, ದಿನಾಂಕ: 21.09.2021.
3. ಸರ್ಕಾರದ ಆದೇಶ ಸಂಖ್ಯೆ: ಸಕಇ 494 ಎಸ್ ಎಲ್ ಪಿ 2022, ಬೆಂಗಳೂರು, ದಿನಾಂಕ: 17-11-2022.
4. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಏಕ ಕಡತ ಸಂಖ್ಯೆ: SWD-PETC0S-6(FS)/3/2023-PETC-SOCIAL WELFARE COMMISSIONER.

****

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಿಂದ (3) ರವರೆಗಿನ ಸರ್ಕಾರಿ ಆದೇಶದಲ್ಲಿ ಪ್ರಬುದ್ಧ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ವಿದೇಶಿ ವಿಶ್ವ ವಿದ್ಯಾಲಯದಲ್ಲಿ ಉನ್ನತ ವ್ಯಾಸಂಗಕ್ಕೆ ಆಯ್ಕೆ ಮಾಡಿ ಧನ ಸಹಾಯ ಒದಗಿಸುವ ಸಂಬಂಧ ಮಾರ್ಗಸೂಚಿಗಳನ್ನೊಳಗೊಂಡಂತೆ ಸರ್ಕಾರದ ಆದೇಶ ಹೊರಡಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ಏಕ ಕಡತದ ತೀರ್ಮಾನದಂತೆ ವಿದೇಶಿ ವಿಶ್ವ ವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನಕ್ಕೆ ಅರ್ಜಿ ಸಲ್ಲಿಸಲು ಅಭ್ಯರ್ಥಿಗಳ ಆಯ್ಕೆ ಮತ್ತು ಅನುದಾನ ಬಿಡುಗಡೆಗೆ ಸಂಬಂಧಿಸಿದಂತೆ ಕೆಲವು ಮಾನದಂಡಗಳನ್ನು ಪ್ರಬುದ್ಧ ಮಾರ್ಗಸೂಚಿಯಲ್ಲಿ ಸೇರ್ಪಡೆಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಕುರಿತು ಪರಿಶೀಲಿಸಿ, ಈ ಕೆಳಕಂಡ ಮಾರ್ಗಸೂಚಿಗಳನ್ನು ಸೇರ್ಪಡೆ ಮಾಡಲು ನಿರ್ಧರಿಸಿ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: SWD-PETC0S-6(FS)/3/2023-PETC-SOCIAL WELFARE COMMISSIONER ( E-1032772), ಬೆಂಗಳೂರು ದಿನಾಂಕ:15 -05-2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಂತೆ, ಪ್ರಬುದ್ಧ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿ ಆಯ್ಕೆಗೆ ಹಾಗೂ ಅನುದಾನ ಬಿಡುಗಡೆಗೆ ಸಂಬಂಧಿಸಿದಂತೆ ಪ್ರಸ್ತುತ ಜಾರಿಯಲ್ಲಿರುವ ಪ್ರಬುದ್ಧ ಮಾರ್ಗಸೂಚಿಗೆ ಈ ಕೆಳಕಂಡ ಮಾನದಂಡಗಳನ್ನು ಸೇರ್ಪಡೆಗೊಳಿಸಿ ಆದೇಶಿದೆ.

ಪ್ರಬುದ್ಧ ಯೋಜನೆಯಡಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಈ ಕೆಳಕಂಡ ಅರ್ಹತಾ ಪರೀಕ್ಷೆಗಳಲ್ಲಿ ನಿಗದಿಪಡಿಸಿದ ಅಂಕಗಳನ್ನು ಗಳಿಸಿರಬೇಕು.

1. **ಅರ್ಜಿ ಸಲ್ಲಿಸಲು ಇರಬೇಕಾದ ಅರ್ಹತೆಗಳು**

1. ಇಂಜಿನೀಯರಿಂಗ್ ಹಾಗೂ ಇತರೆ ಕೋರ್ಸ್ ಗಳನ್ನು ವಿದೇಶಿ ವಿಶ್ವ ವಿದ್ಯಾಲಯಗಳಲ್ಲಿ ಅಧ್ಯಯನ ಮಾಡಲು ಬಯಸಿರುವ ಅಭ್ಯರ್ಥಿಗಳು GRE ಅರ್ಹತಾ ಪರೀಕ್ಷೆಯಲ್ಲಿ, ಮ್ಯಾನೇಜ್ ಮೆಂಟ್ ಅಧ್ಯಯನ ಮಾಡಲು ಬಯಸಿರುವ ಅಭ್ಯರ್ಥಿಗಳು GMAT ಅರ್ಹತಾ ಪರೀಕ್ಷೆಯಲ್ಲಿ ಹಾಗೂ IELTS/TOEFL/PTE ಭಾಷಾ ಪರೀಕ್ಷೆಗಳಲ್ಲಿ ಈ ಕೆಳಕಂಡ ಅಂಕವನ್ನು ಗಳಿಸಿರಬೇಕು.

| | | | |
|---|---|---|---|
| A. | **ಕೋರ್ಸ್**<br>Engineering and Other Courses | GRE :- 300 out of 340 | IELTS :- 6.5 out of 9<br>TOEFL :- 80 out of 120<br>PTE :- 52 out of 90<br>(ಈ ಮೂರು ಭಾಷ ಅರ್ಹತಾ ಪರೀಕ್ಷೆಯಲ್ಲಿ ಯಾವುದಾದರೊಂದರಲ್ಲಿ ನಿಗದಿತ ಅಂಕವನ್ನು ಗಳಿಸಿರಬೇಕು) |
| B. | **ಕೋರ್ಸ್**<br>Management | GMAT :- 600 out of 800 | IELTS :- 6.5 out of 9<br>TOEFL :- 80 out of 120<br>PTE :- 52 out of 90<br>(ಈ ಮೂರು ಭಾಷ ಅರ್ಹತಾ ಪರೀಕ್ಷೆಯಲ್ಲಿ ಯಾವುದಾದರೊಂದರಲ್ಲಿ ನಿಗದಿತ ಅಂಕವನ್ನು ಗಳಿಸಿರಬೇಕು) |

GRE/GMAT/IELTS/TOEFL ಮತ್ತು PTE ಅಂಕವನ್ನು ವಿದೇಶಿ ವಿಶ್ವ ವಿದ್ಯಾಲಯಗಳು ಕೇಳದಿದ್ದರೂ, ಪ್ರಬುದ್ಧ ಯೋಜನೆಯಡಿ ಆಯ್ಕೆಯಾಗಲು ಬಯಸಿರುವ ಅಭ್ಯರ್ಥಿಯು GRE/GMAT/IELTS/TOEFL ಮತ್ತು PTE ಅರ್ಹತಾ ಪರೀಕ್ಷೆಯಲ್ಲಿ ಇಲಾಖೆ ನಿಗದಿಪಡಿಸಿದ ಅಂಕ ಪಡೆಯಬೇಕು ಆಗ ಮಾತ್ರ ಆಯ್ಕೆಗೆ ಅರ್ಹರಾಗುತ್ತಾರೆ.

2. ವಿದೇಶಿ ವಿಶ್ವ ವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡಲು ಬಯಸಿರುವ ಅಭ್ಯರ್ಥಿಯು ಪದವಿಯಲ್ಲಿ ಕನಿಷ್ಠ ಶೇ.55 ರಷ್ಟು ಅಂಕವನ್ನು ಗಳಿಸಿರಬೇಕು. ಪಿ.ಹೆಚ್.ಡಿ ಅಧ್ಯಯನ ಮಾಡಲು ಬಯಸಿರುವ ಅಭ್ಯರ್ಥಿಗಳು ಸ್ನಾತಕೋತ್ತರ ಪದವಿಯಲ್ಲಿ ಶೇ.55 ರಷ್ಟು ಅಂಕವನ್ನು ಗಳಿಸಿರಬೇಕು.

3. ಅಭ್ಯರ್ಥಿಯು ಚಾಲ್ತಿಯಲ್ಲಿರುವ ವರ್ಷದ QS/US News Overall Global Rank-500 ಒಳಗಿನ ವಿದೇಶಿ ವಿಶ್ವ ವಿದ್ಯಾಲಯಗಳಿಂದ Unconditional Offer Letter ಪಡೆದಿರಬೇಕು.

ಪ್ರಬುದ್ಧ ಯೋಜನೆಯಡಿ ಅರ್ಜಿ ಸಲ್ಲಿಸಲು ಅಭ್ಯರ್ಥಿಯು ಈ ಮೇಲ್ಕಂಡ ಅರ್ಹತಾ ಮಾನದಂಡಗಳನ್ನು ಪೂರೈಸಿರಬೇಕು.

2. **ಅಭ್ಯರ್ಥಿಗಳ ಆಯ್ಕೆ:-** ಕಂಡಿಕೆ (1) ರಿಂದ (3) ರ ವರೆಗಿನ ಅರ್ಹತಾ ಮಾನದಂಡಗಳನ್ನು ಪೂರೈಸಿದ ಅಭ್ಯರ್ಥಿಗಳನ್ನು ಸರ್ಕಾರ ನಿಗದಿಪಡಿಸಿದ ವಾರ್ಷಿಕ ಗುರಿಗೆ ಅನುಸಾರವಾಗಿ GRE ಹಾಗೂ GMAT ಅರ್ಹತಾ ಪರೀಕ್ಷೆಯ ಅಂಕದ ಆಧಾರದ ಮೇಲೆ ಆಯ್ಕೆ ಮಾಡುವುದು. GRE/GMAT ನಲ್ಲಿ ಹೆಚ್ಚು ಅಂಕಗಳಿಸಿದವರಿಗೆ ಮೊದಲ ಆದ್ಯತೆ ನೀಡಲಾಗುತ್ತದೆ.
3. **ವಾರ್ಷಿಕ ಆದಾಯ ಮತ್ತು ಸಹಾಯಧನ:-** ಪ್ರಬುದ್ಧ ಯೋಜನೆಯಡಿ ಆಯ್ಕೆಯಾಗುವ ಅಭ್ಯರ್ಥಿಗಳ ಕೌಟುಂಬಿಕ ವಾರ್ಷಿಕ ಆದಾಯದ ಆಧಾರದ ಮೇಲೆ ಈ ಕೆಳಕಂಡ ಕೋಷ್ಟಕದಲ್ಲಿ ಸೂಚಿಸಿರುವ ಮೊತ್ತದ ಧನ ಸಹಾಯ ಹಾಗೂ ಸಾಲವನ್ನು ಒದಗಿಸಲಾಗುವುದು.

| ಕ್ರ.ಸಂ | ವಾರ್ಷಿಕ ಆದಾಯ | ಸಹಾಯಧನ |
|---|---|---|
| 01 | ರೂ.10 ಲಕ್ಷದ ವರೆಗೆ | • ವಿದೇಶಿ ವಿ.ವಿ ಶುಲ್ಕ - ಶೇ.100 ರಷ್ಟು.<br>• ನಿರ್ವಹಣಾ ವೆಚ್ಚ ವಾರ್ಷಿಕ ಗರಿಷ್ಠ ರೂ.8.00 ಲಕ್ಷ.<br>• ವಿಮಾನಯಾನ ವೆಚ್ಚ – ಶೇ. 100 ರಷ್ಟು.<br>• ವಿಮಾ ವೆಚ್ಚ – ಶೇ. 100 ರಷ್ಟು.<br>• ವೀಸಾ ವೆಚ್ಚ – ಶೇ.100 ರಷ್ಟು.<br>• ಇತರೆ ವೆಚ್ಚ – ವಾರ್ಷಿಕ ರೂ.1.00 ಲಕ್ಷಗಳು. |

- ನಿರ್ವಹಣಾ ವೆಚ್ಚವನ್ನು ಒಂದು ವರ್ಷಕ್ಕೆ ಗರಿಷ್ಠ ರೂ.8.00 ಲಕ್ಷ ಪಾವತಿಸುವುದು. ಒಂದೊಮ್ಮೆ ಅಭ್ಯರ್ಥಿ ನಿರ್ವಹಣಾ ವೆಚ್ಚ ರೂ.8.00 ಲಕ್ಷಗಿಂತ ಕಡಿಮೆಯಾಗಿದ್ದರೆ, ಎರಡರಲ್ಲಿ ಯಾವುದು ಕಡಿಮೆಯೋ ಅದನ್ನು ಪಾವತಿಸುವುದು.
- ವಿಮಾನಯಾನ ವೆಚ್ಚವನ್ನು ಕೋರ್ಸ್ ನ ಒಟ್ಟು ಅವಧಿಯಲ್ಲಿ ಒಂದು ಬಾರಿ ಮಾತ್ರ ವಿದೇಶಕ್ಕೆ ತೆರಳಲು ಹಾಗೂ ಕೋರ್ಸ್ ಮುಕ್ತಾಯದ ಬಳಿಕ ಹಿಂದಿರುಗಿ ಭಾರತಕ್ಕೆ Economic Class ನಲ್ಲಿ ಬರಲು ಮಾತ್ರ ಪಾವತಿಸುವುದು.

4. **ಸಾಲ ಹಾಗೂ ಸಹಾಯಧನ:-** ವಾರ್ಷಿಕ ರೂ.10.00 ಲಕ್ಷಕ್ಕಿಂತ ಹೆಚ್ಚು ಆದಾಯ ಹೊಂದಿರುವ ಅಭ್ಯರ್ಥಿಗಳಿಗೆ ಈ ಕೆಳಕಂಡ ದರದಲ್ಲಿ ಸಾಲ ಹಾಗೂ ಸಹಾಯ ಧನವನ್ನು ನೀಡುವುದು.